ಶಿವಸ್ತವಮಂಜರೀ

ಶಾರ್ದೂಲವಿಕ್ರೀಡಿತವೃತ್ತ

ತ್ವಾಮಾಹುಃ ಪರಮೇಶ್ವರಂ ಪಶುಪತಿಂ ಚಿದ್ರೂಪಮಾದ್ಯಂ ವಿಭುಂ
ಧ್ಯೇಯಂ ಜ್ಞೇಯಮನಾದಿಮಧ್ಯನಿಧನಂ ಜ್ಯೋತಿಃ ಪರಂ ಕಾರಣಮ್ |
ನಿರ್ದ್ವಂದ್ವಂ ಪ್ರಣವೈಕವಾಚ್ಯಮನಘಂ ವಿಶ್ವಾಧಿಕಂ ಶಾಶ್ವತಂ
ಸರ್ವಜ್ಞಂ ಪರಲಿಂಗರೂಪಮಜಡಂ ಬ್ರಹ್ಮಾಪ್ರಮೇಯಂ ಶಿವಮ್ || ೧ ||

ಎಲೈ ಶಿವನೇ, ಪ್ರಾಜ್ಞರು ನಿನ್ನನ್ನು ಪರಮೇಶ, ಪಶುಪತಿ, ಚೈತನ್ಯರೂಪಿ, ಚಿದ್ರೂಪಿ, ಪ್ರಭು, ಧ್ಯಾನಯೋಗ್ಯ, ಪರಬ್ರಹ್ಮ, ಸೃಷ್ಟಿ-ಸ್ಥಿತಿ-ಲಯ ರಹಿತ, ಪ್ರಕಾಶರೂಪಿ, ಪರಮಕಾರಣ, ದ್ವಂದ್ವಾತೀತ, ಓಂಕಾರದ ಏಕೈಕ ವಿಶೇಷಣ, ಪಾಪರಹಿತ, ಲೋಕಾತೀತ, ಸ್ಥಿರರೂಪಿ, ಸರ್ವಜ್ಞ, ಘನಲಿಂಗರೂಪಿ, ಚೈತನ್ಯ, ಬ್ರಹ್ಮ, ಪರಮಾತ್ಮ, ಶುಭಕರ ಎಂದು ಕರೆಯುತ್ತಾರೆ.

ಯಜ್ಞಾರಾತಿರಸಿ ಪ್ರಭೋ ಪುನರಹೋ ಯಜ್ಞೇಶ್ವರಸ್ತ್ವಂ ತ್ರಯೀ-
ಸಂಸ್ತುತ್ಯಃ ಸತತಂ ತ್ರಯೀಸಮುದಯಾತೀತಃ ಕಲಾವರ್ಜಿತಃ |
ಪ್ರಖ್ಯಾತಃ ಸಕಲಃ ಸಮಸ್ತಜಗತಾಂ ಪಾಲಃ ಪ್ರಹರ್ತಾ ಪರಂ
ಮಾಯೀದೇವ ವಿಮಾಯತಾಮುಪಗತಃ ಕೋ ವೇತ್ತಿ ತತ್ತ್ವಾಂ ಭುವಿ || ೨ ||

ಹೇ ಸ್ವಾಮಿಯೇ, ನೀನು ದಕ್ಷಯಜ್ಞಕ್ಕೆ ಶತ್ರುವಾಗಿದ್ದರೂ, ಯಜ್ಞೇಶ್ವರನಾಗಿರುವೆ, ಋಗ್ವೇದ, ಯಜುರ್ವೇದ, ಸಾಮವೇದಗಳೆಂಬ ವೇದತ್ರಯಗಳು ನಿನ್ನನ್ನು ಸದಾ ಕೊಂಡಾಡುತ್ತಿದ್ದರೂ ಅವುಗಳಿಗೆ ನಿಲುಕದವನಾಗಿರುವೆ. ನೀನು ನಿಷ್ಕಲನಾಗಿದ್ದರೂ ಕಲಾಸಹಿತನೆಂದು ಪ್ರಸಿದ್ಧನಾಗಿರುವೆ. ವಿಶ್ವವನ್ನೆಲ್ಲಾ ಪಾಲಿಸುತ್ತಿದ್ದರೂ ನೀನು ಶ್ರೇಷ್ಠ ಲಯಕರ್ತೃವಾಗಿರುವೆ. ಮಾಯೆಯ ಒಡಗೂಡಿದ್ದರೂ ಮಾಯಾತೀತನಾಗಿರುವೆ. ಆಹಾ! ಈ ಭೂಮಿಯಲ್ಲಿ ನಿನ್ನನ್ನು ಅರಿತವರು ಯಾರಿದ್ದಾರೆ?

ಬ್ರಹ್ಮಾಸ್ಯಂಬುಜಲೋಚನೋಽಸಿ ಯದಿದಂ ಸರ್ವಂ ತ್ವಮೇವಾಸಿ ಚೇ -
ತ್ಯಾಹುಃ ಕೇಚಿದುಪಾಸನೇ ಕುಮತಯಸ್ತೇ ಮಾಯಯಾ ಮೋಹಿತಾಃ |

ವಿಶ್ವಂ ಸಾರ್ಧಮಮೀಭಿರೇತದಖಿಲಂ ಶಕ್ತೇಸ್ಸಮಾಪ್ತಂ ಕಿಯ -
ತ್ಯಂಶೇ ಚಂದ್ರಕಲಾಕಲಾಪ ತದಿದಂ ಭೂಯಸ್ತ್ರಯೀವಿಶ್ರುತಮ್ ॥ ೩ ॥

ಎಲೈ ಚಂದ್ರಮೌಳಿಯೇ, ಕೆಲವರು ನಿನ್ನನ್ನು ಪೂಜಿಸುವಾಗ ನೀನು ಬ್ರಹ್ಮನೆಂದೂ, ವಿಷ್ಣುವೆಂದೂ, ಸಮಸ್ತವೂ ನೀನೇ ಆಗಿರುವೆ ಎಂದೂ ಹೇಳುತ್ತಾರೆ. ಮತಿಹೀನರಾದ ಅವರು ಮಾಯೆಯ ಮೋಹಕ್ಕೆ ಒಳಗಾಗಿದ್ದಾರೆ. ಏಕೆಂದರೆ ಬ್ರಹ್ಮ, ವಿಷ್ಣು ಸಹಿತವಾದ ಸಂಪೂರ್ಣ ಜಗತ್ತು ನಿನ್ನ ಈ ಶಕ್ತಿಯ ಅಲ್ಪಾಂಶದಿಂದಲೇ ಪೂರ್ಣವಾಗಿದೆ. ಈ ವಿಷಯವು ವೇದದ ಬಹುಭಾಗಗಳಲ್ಲಿ ವಿಖ್ಯಾತವಾಗಿದೆ.

ಶಕ್ತಿಸ್ತೇ ದ್ವಿವಿಧಾ ಬಭೂವ ಕರುಣಾಭಕ್ತಿಸ್ವರೂಪೇಣ ಚ
ಪ್ರಾಚೀನಾ ತ್ವದಪಾಂಗಸಂಸ್ಥಿತವತೀ ಶಂಭೋ ದ್ವಿತೀಯಾ ಪುನಃ ।
ಹೃದ್ದೇಶೇ ವಸತೀಹ ವೈ ಜನಿರುಜಂ ಹರ್ತುಂ ಕೃಪಾವಾಹಿನೀಂ
ತಾಂ ವಂದೇ ಜನನೀಮುಮಾಂ ನಿರುಪಮಾಂ ಮುಕ್ತಿಪ್ರದಾಮದ್ರಿಜಾಮ್ ॥ ೪ ॥

ಹೇ ಶಂಕರನೇ, ನಿನ್ನ ಪರಾಶಕ್ತಿಯು ಕರುಣೆ, ಭಕ್ತಿ ಎಂಬ ಎರಡು ರೂಪಗಳನ್ನು ಹೊಂದಿದೆ. ಮೊದಲನೆಯದಾದ ಕರುಣೆಯು ನಿನ್ನ ಕಟಾಕ್ಷದಲ್ಲಿ ಸ್ಥಿರವಾಗಿದೆ. ಎರಡನೆಯದಾದ ಭಕ್ತಿಯಾದರೋ ನಿನ್ನ ಹೃದಯದಲ್ಲಿ ನೆಲೆಸಿದೆ. ಹೀಗೆ ಈ ಲೋಕದಲ್ಲಿ ದಯಾಸಿಂಧುವೂ, ಉಪಮಾತೀತಳೂ, ಕೈವಲ್ಯಪ್ರದೆಯೂ, ಗಿರಿಜೆಯೂ, ತಾಯಿ ಪಾರ್ವತಿಯೂ ಆದ ಆ ಶಕ್ತಿಗೆ ಭವರೋಗನಿವಾರಣೆಗಾಗಿ ನಮಿಸುತ್ತೇನೆ.

ಪಶ್ಯದ್ಭ್ಯಸ್ತವ ತಾಂಡವಂ ಪರಮಭೀಪ್ಸಾರ್ಥಂ ದದಾಸಿ ಪ್ರಭೋ
ದೇವೇಭ್ಯಶ್ಚಿರಮದ್ರಿಜೇಶ ಬಹುಧಾ ರೂಪಾಣ್ಯಹಂ ಮಾಯಯಾ ।
ಧೃತ್ವಾ ನರ್ತನಮಾಚರಾಮಿ ಚ ತಥಾಪ್ಯೇಕಸ್ಯ ರೂಪಸ್ಯ ವಾ
ದೃಷ್ಟ್ವಾ ಹೃಷ್ಟಮನಾಃ ಕುತಸ್ತ್ವಮಧುನಾ ದತ್ಸೇ ನ ಕಿಂಚಿದ್ವರಮ್ ॥ ೫ ॥

ಈಶನೇ, ನಿನ್ನ ಶ್ರೇಷ್ಠ ತಾಂಡವನೃತ್ಯವನ್ನು ನೋಡುವ ದೇವತೆಗಳಿಗೆ ಇಷ್ಟಾರ್ಥವನ್ನು ದಯಪಾಲಿಸುವೆ. ಹೇ ಕೈಲಾಸವಾಸಿಯೇ, ನಾನು ಮಾಯೆಯಿಂದ ಬಹುಕಾಲದಿಂದಲೂ ಬಹುರೂಪಗಳನ್ನು ಧರಿಸಿ ನರ್ತಿಸುತ್ತಿದ್ದೇನೆ. ನೀನು ನನ್ನ ಒಂದು ರೂಪವನ್ನಾದರೂ ಕಂಡು ಸಂತುಷ್ಟನಾಗಿ ಯಾವುದಾದರೂ ವರವನ್ನು ಏಕೆ ನೀಡುತ್ತಿಲ್ಲ?

ಚಿದ್ವ್ಯೋಮ್ನಿ ಸ್ಥಿತಭಾನುರೇವ ಹಿ ಭವಾನೇನಸ್ತಮಃ ಸಂಹರನ್
ತ್ವಾಮೀಶಾನ ತಿರೋದಧೇ ಪರಿಣತಾ ಮಾಯಾತ್ರ ಕಾದಂಬಿನೀ ।
ತಸ್ಮಾದ್ದುರ್ದಿನತಾಂ ಪ್ರಯಾಂತಿ ಚ ದಿನಾನ್ಯಸ್ಮನ್ಮನಶ್ಚಕ್ಷುಷ -
ಸ್ತ್ವಾಮುತ್ಸಾರ್ಯ ಕರೋತು ಗೋಚರಮಿನಂ ತ್ವಾಂ ತ್ವತ್ಪ್ರಸಾದಾನಿಲಃ ॥ ೬ ॥

ಹೇ ಈಶಾನನೇ, ನೀನು ಪಾಪವೆಂಬ ಕತ್ತಲೆಯನ್ನು ನಾಶಮಾಡುವ ಚಿದಾಕಾಶದಲ್ಲಿರುವ ಸೂರ್ಯನಾಗಿದ್ದೀಯೆ. ಈ ಜಗತ್ತಿನಲ್ಲಿ ಮಾಯೆಯೆಂಬ ಮೇಘಮಾಲೆಯು ನಿನ್ನನ್ನು

ಮರೆಮಾಚಿದೆ. ಆದ್ದರಿಂದ ದಿನಗಳು ಸೂರ್ಯನಿಲ್ಲದ ದಿನಗಳಾಗಿವೆ. ನಿನ್ನ ಅನುಗ್ರಹವೆಂಬ ವಾಯುವು ಆ ಮೇಘವೃಂದವನ್ನು ದೂರ ಸರಿಸಲಿ. ಅದರಿಂದ ಸೂರ್ಯನಾದ ನೀನು ನನ್ನ ಮನೋದೃಷ್ಟಿಗೆ ಕಾಣುವಂತೆ ಮಾಡಲಿ.

ಮಾನುಷ್ಯಂ ಬಹುದುರ್ಲಭಂ ಮಮ ಪುನರ್ದತ್ತ್ವಾ ತು ಸಜ್ಜನ್ಮತಾಂ
ನೀತ್ವಾ ಸದ್ಗುರುವಿಗ್ರಹಾಧಿಗತವಾನ್ ಕೃತ್ವಾಪಿ ದೀಕ್ಷಾವಿಧಿಮ್ |
ಸ್ಥಿತ್ವಾ ಮತ್ಕರಪಂಕಜೇ ಚ ವಿಲಸಲ್ಲಿಂಗಾಕೃತಿಸ್ತ್ವಂ ಕುತ -
ಸ್ತ್ವದ್ಭಕ್ತಿಂ ನ ದದಾಸಿ ಸಾಂಪ್ರತಮಿದಂ ಕಿಂ ತೇ ಕೃಪಾಶಾಲಿನಃ || ೭ ||

ಮಾನವ ಜನ್ಮವು ಬಲು ಅಪರೂಪವಾದುದು. ನೀನು ನನಗಾದರೋ ಒಳ್ಳೆಯ ಜನ್ಮವನ್ನು ನೀಡಿರುವೆ. ಸದ್ಗುರುರೂಪಿಯಾಗಿ ಬಂದು ದೀಕ್ಷಾವಿಧಿಯನ್ನು ನೆರವೇರಿಸಿರುವೆ. ನನ್ನ ಕರಕಮಲದಲ್ಲಿ ಕಂಗೊಳಿಸುವ ಲಿಂಗವಾಗಿ ನೆಲೆಸಿರುವೆ. ಇಂತಹ ನೀನು ನಿನ್ನನ್ನು ಆರಾಧಿಸುವ ಭಕ್ತಿಯನ್ನು ನನಗೆ ಏಕೆ ಕೊಡುತ್ತಿಲ್ಲ? ಇದು ದಯಾಮಯನಾದ ನಿನಗೆ ಸೂಕ್ತವೇನು?

ಆಶಾಘೋರಪಿಶಾಚಿಕಾ ಸಹಚರಶ್ಚೇತೋ ಭವೋಗ್ರಗ್ರಹಃ
ಪ್ರಾವಿಶ್ಯಾಂಗಮಿದಂ ಧುನೋತಿ ತನುತೇ ನಾನಾ ವಿಕಾರಾನ್ಮಮ |
ದುರ್ವಾರೋಽಯಮಿಮಂ ನಿವಾರಯ ವಿಭೋ ಮಂತ್ರೇಣ ತೇ ಭಸ್ಮನಾ
ಕಾರುಣ್ಯಾತ್ಪ್ರವಿಶ ತ್ವಮೇವ ತದಿದಂ ಜಾತಸ್ತ್ವಯಾಹಂ ಸುಖೀ || ೮ ||

ಎಲೈ ಸ್ವಾಮಿಯೇ, ಕಾಮವೆಂಬ ಉಗ್ರಗ್ರಹವು ಆಸೆಯೆಂಬ ಕ್ರೂರ ಪಿಶಾಚಿಯ ಸಂಗಾತಿಯಾಗಿ, ನನ್ನ ದೇಹವನ್ನು ಪ್ರವೇಶಿಸಿ ನಡುಗಿಸುತ್ತಿದೆ. ತಡೆಯಲಸಾಧ್ಯವಾದ ಈ ಕಾಮವು ನನ್ನ ಹಲವು ವಿಕಾರಗಳನ್ನು ಹೆಚ್ಚಿಸುತ್ತಿದೆ. ಇದನ್ನು ನಿನ್ನ ಮಂತ್ರದಿಂದಲೂ, ಭಸ್ಮದಿಂದಲೂ ನಿವಾರಿಸು. ನೀನೇ ದಯೆ ತೋರಿ ನನ್ನ ಶರೀರವನ್ನು ಪ್ರವೇಶಿಸು. ಆಗ ನಿನ್ನಿಂದ ನಾನು ಸಂತೋಷ ಹೊಂದುತ್ತೇನೆ.

ಸೋಮೋತ್ತಂಸ ಮನೋ ಮದೀಯಮನಿಶಂ ನ ತ್ವಾಂ ಭಜತ್ಯಾತ್ಮಜ -
ಪ್ರದ್ಯುಮ್ನದ್ವಿಷಮಾಕಲಯ್ಯ ರಿಪುತಾಬುದ್ಧ್ಯಾ ಪುನಸ್ತಂ ಮೃತಮ್ |
ಜೀವಂತಂ ಚ ವಿಧಾಯ ನಿರ್ನಿಜದೃಶಾ ವಾಮಾಃ ಸಮಾಸೇವತೇ
ಮೇ ಕಿಂ ಕುಪ್ಯಸಿ ದಹ್ಯತಾಂ ತವ ಪದಧ್ಯಾನಾದ್ವಿಮುಕ್ತಂ ಮನಃ || ೯ ||

ಹೇ ಶಂಭುವೇ, ತನ್ನಲ್ಲಿ ಹುಟ್ಟಿದ ಕಾಮನಿಗೆ ನೀನೇ ವೈರಿಯೆಂದು ಸದಾ ನನ್ನ ಮನಸ್ಸು ಭಾವಿಸಿದೆ. ಆದ್ದರಿಂದ ನಿನ್ನನ್ನು ಶತ್ರುವೆಂದು ತಿಳಿದು ಆರಾಧಿಸುತ್ತಿಲ್ಲ. ಆ ನಿರ್ಜೀವಿ ಕಾಮನಿಗೆ ಮತ್ತೆ ಜೀವ ತುಂಬಿ ಎವೆಯಿಕ್ಕದೆ ಸುಂದರಿಯರನ್ನು ಧ್ಯಾನಿಸುತ್ತಿದೆ. ಸುಮ್ಮನೆ ನನ್ನ ಮೇಲೆ ಏಕೆ ಕೋಪಗೊಳ್ಳುತ್ತೀಯೆ? ನಿನ್ನ ಪಾದಧ್ಯಾನದಿಂದ ದೂರ ಸರಿದ ನನ್ನ ಮನಸ್ಸಿನ ಭಾವನೆಯನ್ನು ದಹಿಸು.

ಹತ್ವಾ ಪುಷ್ಪಶರೈರಪಿ ತ್ರಿಭುವನಂ ತಾತಸ್ಯ ಗೋಪೀಜನೇ
ಜಾರತ್ವಂ ಚ ವಿಧಾಯ ಸೋದರಮಜಂ ಕೃತ್ವಾತ್ಮಜಾಕಾಮುಕಮ್ |
ಚಂದ್ರೇಂದ್ರಾವಪಿ ಪಾರದಾರಿಕರತೌ ಕುರ್ವಂತಮತ್ಯುದ್ಧತಂ
ಮಾರಂ ಮರ್ದಿತವಾನ್ ಭವಾನ್ ಪರಮಿದಂ ಯುಕ್ತಂ ಪ್ರಭೋಸ್ತೇ ಭುವಿ || ೧೦ ||

ಮನ್ಮಥನು ಕುಸುಮ ಬಾಣಗಳಿಂದ ತ್ರಿಲೋಕಗಳನ್ನು ನಾಶ ಮಾಡಿದನು. ತನ್ನ ತಂದೆಯಾದ ಕೃಷ್ಣನಿಗೆ ಗೋಪಿಕೆಯರಲ್ಲಿ ವ್ಯಭಿಚಾರವನ್ನು ಉಂಟುಮಾಡಿದನು. ಸೋದರನಾದ ಬ್ರಹ್ಮನಿಗೆ ಆತನ ಪುತ್ರಿಯಾದ ಸರಸ್ವತಿಯನ್ನು ಕಾಮಿಸುವಂತೆ ಮಾಡಿದನು. ಚಂದ್ರ, ಇಂದ್ರರನ್ನು ಪರಸ್ತ್ರೀಲೋಲರನ್ನಾಗಿ ಮಾಡಿದನು. ಎಲೈ ಸ್ವಾಮಿಯೇ, ನೀನು ಇಂತಹ ಉದ್ಧಟನಾದ ಮನ್ಮಥನನ್ನು ದಮನ ಮಾಡಿರುವೆ. ನಿನ್ನ ಈ ಕೃತ್ಯವು ಲೋಕದಲ್ಲಿ ಶ್ರೇಷ್ಠವಾಗಿದೆ.

ಯಾದಸ್ಸಾಗರಮಧ್ಯಗಂ ಗಜವರಂ ಗೃಹ್ಣತ್ಸ್ವಭಕ್ತಂ ಹರಿ -
ಶ್ಚಕ್ರೇಣೈವ ಚಕರ್ತ ದೇವ ಭವತಾ ದತ್ತೇನ ಕಿಂ ಪೌರುಷಮ್ |
ಪಾಶೇನಾಶು ಚಕರ್ಷ ತಾಪಸಶಿಶುಂ ಭಕ್ತಂ ಜಗದ್ಭಸ್ಮರಃ
ಕಾಲಸ್ತಾದನತಃ ಪದಸ್ತಮವಧೀಃ ಶಕ್ತಿಸ್ತವೈಪಾಸಮಾ || ೧೧ ||

ಹೇ ಪ್ರಭುವೇ, ಹರಿಯು ಸಾಗರಮಧ್ಯದಲ್ಲಿ ತನ್ನ ಭಕ್ತನಾದ ಗಜೇಂದ್ರನನ್ನು ಹಿಡಿದ ಮೊಸಳೆಯನ್ನು ಕೊಂದನು. ಅದಕ್ಕೆ ನೀನಿತ್ತ ಚಕ್ರವೇ ಕಾರಣ. ಇದರಲ್ಲಿ ಅವನ ಪರಾಕ್ರಮವೇನಿದೆ? ಲೋಕಭಕ್ಷಕನಾದ ಯಮನು ಪಾಶದಿಂದ ಮುನಿಬಾಲಕನಾದ ಭಕ್ತ ಮಾರ್ಕಂಡೇಯನನ್ನು ವೇಗವಾಗಿ ಸೆಳೆದನು. ತಕ್ಷಣ ನೀನು ಅವನನ್ನು ಪಾದಾಘಾತದಿಂದ ಶಿಕ್ಷಿಸಿದೆ. ನಿನ್ನ ಶೌರ್ಯವಾದರೋ ಅದ್ವಿತೀಯವಾದುದು.

ಕಾಮೋ ವಿಘ್ನಕರಸ್ತವಾಂಘ್ರಿಯುಗಲಧ್ಯಾನಸ್ಯ ಕಾಲಸ್ತಥಾ
ಪೂಜಾದೇಶ್ಚ ಪುರಾ ತ್ವದಕ್ಷಿಶಿಖಿನಾ ಪ್ಲುಷ್ಟೌ ಪುನರ್ಜೀವಿತೌ |
ತಾವೇತಾವಬಲೌ ಮಹೇಶ ಭವತಾ ಸ್ಪರ್ಧಾವಿಧೌ ಕಿಂಕರಂ
ಬಾಧೇತೇ ಭವತಸ್ಸ್ಮೃತಾದ್ಯವಿರಸೌ ಮಾಮುದ್ಧತೌ ದುರ್ಬಲಮ್ || ೧೨ ||

ಎಲೈ ಜಗದೀಶ್ವರನೇ, ಕಾಮನು ನಿನ್ನ ಪಾದದ್ವಯಗಳ ಧ್ಯಾನಕ್ಕೆ ಅಡ್ಡಿ ಮಾಡುತ್ತಾನೆ. ಹಾಗೆಯೇ ಯಮನು ಪೂಜಾದಿಗಳಿಗೆ ವಿಘ್ನವನ್ನು ಉಂಟುಮಾಡುತ್ತಾನೆ. ಹಿಂದೆ ಅವರು ನಿನ್ನ ಅಗ್ನಿನೇತ್ರದಿಂದ ದಹಿಸಲ್ಪಟ್ಟು, ಮತ್ತೆ ನಿನ್ನಿಂದಲೇ ಜೀವದಾನ ಪಡೆದರು. ಪೂರ್ವಜನ್ಮದ ಸ್ಮರಣೆಯಿಂದ ಅವರು ನಿನ್ನೊಡನೆ ಸ್ಪರ್ಧಿಸಲು ಅಸಮರ್ಥರಾಗಿದ್ದಾರೆ. ಆದ್ದರಿಂದ ಉದ್ಧಟರಾದ ಅವರು ನಿನ್ನ ಸೇವಕನೂ, ನಿಶ್ಶಕ್ತನೂ ಆದ ನನ್ನನ್ನು ಹಿಂಸಿಸುತ್ತಾರೆ.

ಮಾಯಾದುಸ್ತರಪಂಕಮಧ್ಯಪತಿತಂ ಕ್ರೋಶಂತಮಂಬಾರವಾ -
ತ್ತಾಂತಂ ತ್ವಾಮಿಹ ಖಿನ್ನಮಜ್ಞಮಬಲಂ ಭೀತ್ಯಾತುರಂ ಮಾಂ ಕೃಶಮ್ |

ಯಾವನ್ಮೃತ್ಯುಮೃಗಾರಿರೇತ್ಯ ನ ಹರತ್ಯಹ್ನಾಯ ತಾವತ್ಪ್ರಭೋ
ತ್ರಾಯಸ್ವ ತ್ವಮುಪೇತ್ಯ ನಾನ್ಯಶರಣಂ ಕಾರುಣ್ಯವಾರಾಂನಿಧೇ || ೧೩ ||

ಹೇ ಪ್ರಭುವೇ, ಕರುಣಾಸಿಂಧುವೇ, ದಾಟಲು ಕಷ್ಟವಾದ ಮಾಯೆಯೆಂಬ ಕೆಸರಿನ ಮಧ್ಯದಲ್ಲಿ ಬಿದ್ದಿದ್ದೇನೆ. ನಿನ್ನನ್ನು 'ಅಂಬಾ' ಎಂದು ಕೂಗಿ ಕರೆಯುತ್ತಿದ್ದೇನೆ. ದುಃಖಿಯೂ, ಅಜ್ಞಾನಿಯೂ, ದುರ್ಬಲನೂ, ಭಯದಿಂದ ಕಂಗೆಟ್ಟವನೂ, ಕೃಶನೂ ಆದ ನನ್ನನ್ನು ಯಮನೆಂಬ ಸಿಂಹವು ಬಂದು ಕೊಲ್ಲಲಿದೆ. ಅಷ್ಟರೊಳಗೆ ನೀನು ಬಂದು ಅನನ್ಯಶರಣನಾದ ನನ್ನನ್ನು ಕೂಡಲೇ ಕಾಪಾಡು.

ಪಾಯಂ ಪಾಯಮಿದಂ ಪರಾಕ್ಷರಮಹಾನಾದಾಮೃತಂ ತೃಪ್ತಿಮಾನ್
ಧ್ಯಾನಜ್ಞಾನಮನೋಜ್ಞಪಕ್ಷಯುಗಲಃ ಶಾಂತಿಸ್ತ್ರಿಯಾ ಲಾಲಿತಃ |
ತ್ವತ್ಪಾದಾಂಬುಜಪಂಜರೇ ಪ್ರತಿವಸನ್ ತ್ವತ್ಪಂಚವರ್ಣಾಂ ವದನ್
ವರ್ತಿಷ್ಯೇ ಶುಕವತ್ಕದಾ ಗತಭಯಃ ಕಾಲಾದ್ಬಿಡಾಲಾದಹಮ್ || ೧೪ ||

ಈ ಓಂಕಾರ ಮಹಾನಾದವೆಂಬ ಅಮೃತವನ್ನು ಮತ್ತೆ ಮತ್ತೆ ಕುಡಿದು ಸಂತೃಪ್ತನಾಗಿ, ಧ್ಯಾನ-ಜ್ಞಾನ ಎಂಬ ಎರಡು ಸುಂದರ ರೆಕ್ಕೆಗಳನ್ನು ಪಡೆದು, ಶಾಂತಿಯೆಂಬ ಸ್ತ್ರೀಯಿಂದ ಮುದ್ದಾಡಲ್ಪಟ್ಟು, ನಿನ್ನ ಪಾದಕಮಲವೆಂಬ ಪಂಜರದಲ್ಲಿ ವಾಸಿಸುತ್ತಾ, ನಿನ್ನ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತಾ, ಯಮನೆಂಬ ಬೆಕ್ಕಿನ ಭಯವಿರದ ಗಿಳಿಯಂತೆ ನಾನು ಎಂದು ಇರುವೆನು?

ರಾಗದ್ವೇಷವಿಮೋಹಮುಖ್ಯವಿಷಮಾಪಥ್ಯೋದ್ಭವಂ ದುಸ್ಸಹಂ
ದುರ್ವಾರಂ ಭವದೀರ್ಘರೋಗಮಧಿಕಂ ಮದ್ಬಾಧಕಂ ಸುಸ್ಥಿರಮ್ |
ವಿಶ್ವಾಧೀಶ ಭವಾನ್ಭವಾಮಯಭಿಷಕ್ ತತ್ಸಂಹರತ್ವದ್ಯ ತಂ
ಕ್ಷಿಪ್ರಂ ಚೇತಿ ಶರಣ್ಯ ಯಾಮಿ ಶರಣಂ ತ್ವಾಮೇವ ದೇವೋತ್ತಮಮ್ || ೧೫ ||

ಹೇ ವಿಶ್ವನಾಥನೇ, 'ಅನುರಾಗ, ದ್ವೇಷ, ವ್ಯಾಮೋಹ ಮೊದಲಾದ ಭೀಕರ ಅಪಥ್ಯಗಳಿಂದ ಉಂಟಾದ ಭವ ರೋಗವು ನನ್ನನ್ನು ಬಹುಕಾಲದಿಂದ ಬಾಧಿಸುತ್ತಿದೆ. ದುಸ್ಸಹನೀಯವೂ ಅನಿವಾರ್ಯವೂ ಆದ ಈ ರೋಗವನ್ನು ಭವರೋಗವೈದ್ಯನಾದ ನೀನು ಶೀಘ್ರವಾಗಿ ಗುಣಪಡಿಸು' ಎಂದು ಪರಮೇಶ್ವರನಾದ ನಿನ್ನನ್ನೇ ಮೊರೆ ಹೊಕ್ಕಿದ್ದೇನೆ.

ದುಷ್ಪ್ರೇಕ್ಷ್ಯಂ ತ್ರಿಪುರಂ ನಿರೀಕ್ಷ್ಯ ಸುಚಿರಂ ದಗ್ಧ್ವಾತಿಘೋರಂ ವಿಷಂ
ಪೀತ್ವಾ ವಿಶ್ವಮಿದಂ ತ್ವಯೈವ ಮಹತಾ ಯತ್ನೇನ ಸಂರಕ್ಷಿತಮ್ |
ಕಾರುಣ್ಯಾನ್ಮಮ ರಕ್ಷಣೇ ತವ ಕುತಸ್ತಾದೃಕ್ಪ್ರಯಾಸಃ ಕೃಪಾ -
ಪೀಯೂಷಾರ್ದ್ರದೃಶೈವ ಪಶ್ಯಸಿ ಯದಿ ಸ್ಯಾಂ ಬಂಧಮುಕ್ತಃ ಸುಖೀ || ೧೬ ||

ನೋಡಲು ದುಸ್ಸಾಧ್ಯವಾದ ತ್ರಿಪುರವನ್ನು ಬಹುಕಾಲ ನೋಡಿ ದಹಿಸಿ ಮತ್ತು ಅತಿಭೀಕರ ವಿಷವನ್ನು ಕುಡಿದು ನೀನು ಈ ಲೋಕವನ್ನು ಬಹಳ ಜಾಗರೂಕತೆಯಿಂದ ರಕ್ಷಿಸಿರುವೆ.

ನಿನಗೆ ಅಂತಹ ಶ್ರಮವೆಲ್ಲಿದೆ? ನೀನು ಕರುಣಾಮೃತದ ದಯೆಯಿಂದ ನನ್ನನ್ನು ಕಾಪಾಡಲು ಆರ್ದ್ರ ನೋಟದಿಂದ ನೋಡಿದ ಮಾತ್ರಕ್ಕೇ ನಾನು ಬಂಧಮುಕ್ತನಾಗಿ ಸಂತುಷ್ಟನಾಗುತ್ತೇನೆ.

ಅಜ್ಞತ್ವಾತ್ತವ ಪೂಜನಂ ನ ಕೃತವಾನ್ ಪೂರ್ವಂ ಶಿವಾಹಂ ಜಡ -
ಸ್ತ್ವಾಮೀಶಂ ತ್ವಮಪಿ ಪ್ರಭೋ ಬಹುಶುಚಂ ಜ್ಞಾತ್ವಾಪಿ ಮಾಂ ಕಿಂಕರಮ್ |
ಪಶ್ಯನ್ ಪಾಲಿತವಾನ್ನ ಚಾಸಿ ಜನಿತಃ ಕಾರುಣ್ಯತೋ ವಾಧುನಾ
ಸ್ವಾಮಿನ್ ಪಾಲಯ ಪಾಲಯಾಶು ಶರಣಂ ತ್ವಾಮೇವ ಯಾತಂ ಚ ಮಾಮ್ || ೧೭ ||

ಎಲೈ ಈಶನೇ, ನೀನು ಲೋಕೇಶ್ವರನಾಗಿದ್ದರೂ, ಮೂರ್ಖನಾದ ನಾನು ಮೊದಲು ಅಜ್ಞಾನದಿಂದ ನಿನ್ನ ಪೂಜೆಯನ್ನು ಮಾಡಲಿಲ್ಲ. ಅತಿದುಃಖಿಯಾದ, ಸೇವಕನಾದ ನನ್ನನ್ನು ನೀನು ನೋಡಿ ಅರಿತರೂ ಸಹ ಕಾಪಾಡಲಿಲ್ಲ. ಸ್ವಾಮಿಯೇ, ಈಗ 'ನೀನೇ ಶರಣು' ಎಂದು ಬಂದಿರುವೆ, ಕೃಪೆಯಿಂದ ನನ್ನನ್ನು ಕೂಡಲೇ ಕಾಪಾಡು, ಕಾಪಾಡು.

ಕೇಚಿದ್ದೇಹಭೃತಾಂ ತ್ವದೀಯ ಕರುಣಾಂ ಪ್ರಾಹುರ್ಭೃಶಂ ದುರ್ಲಭಾಂ
ತಾಂ ಕೇಚಿತ್ಸುಲಭಾಂ ಪುರಾತನಗಣಾಃ ಶ್ರುತ್ವಾ ತದೇಷಾಂ ವಚಃ |
ಪೂರ್ವೋಕ್ತೇ ಚ ಬಿಭೇಮಿ ದೇವ ಚರಮೇ ನಂದಾಮಿ ದೀನೇ ಮಯಿ
ಪ್ರಾಯಸ್ತ್ವಂ ಕುರು ತದ್ದ್ವಿತೀಯವಚನಂ ದ್ರಾಕ್ಸಾರ್ಥಕಂ ಶಂಕರಮ್ || ೧೮ ||

ಹೇ ಮಹೇಶ್ವರನೇ, ಮಾನವರಿಗೆ ನಿನ್ನ ದಯೆಯು ಬಹು ದುರ್ಲಭವೆಂದು ಕೆಲವರು ಹೇಳುತ್ತಾರೆ. ಕೆಲ ಪುರಾತನರು ಆ ದಯೆಯು ಸುಲಭವೆಂದು ನುಡಿಯುತ್ತಾರೆ. ಇವರ ಮಾತುಗಳನ್ನು ಕೇಳಿದಾಗ ಮೊದಲ ಮಾತಿಗೆ ಭೀತನಾಗುತ್ತೇನೆ. ಎರಡನೆಯದಕ್ಕೆ ಸಂತೋಷಪಡುತ್ತೇನೆ. ದೀನನಾದ ನನ್ನಲ್ಲಿ ದಯೆ ತೋರುವುದರ ಮೂಲಕ ಆ ಎರಡನೆಯ 'ಶಂಕರ' ಪದವು 'ಮಂಗಳಕರ' ಎಂಬ ಸಾರ್ಥಕ ಅರ್ಥವನ್ನು ನೀಡುವಂತೆ ಮಾಡು.

ಸಂಸಾರಾರ್ಣವಗರ್ತಮಧ್ಯಪತಿತೋ ದೈವಾದನೇನೋದ್ಧೃತಃ
ಪಾದಾಬ್ಜಪ್ಲವ ಏವ ದೇವ ಭವತೋ ಯಃ ಸನ್ನಿಕೃಷ್ಟೋ ಜವಾತ್ |
ಸೋಽಹಂ ನೇಹ ಗೃಹೀತವಾನ್ಯದಿ ತದಾ ಮಗ್ನೋ ಭವೇಯಂ ಪುನ -
ಸ್ತತ್ರೇತ್ಯದ್ಯ ಗೃಹೀತವಾಂಸ್ತರತು ಮಾಂ ತಸ್ಮಾತ್ತ್ವದಂಘ್ರಿಪ್ಲವಃ || ೧೯ ||

ಎಲೈ ಸ್ವಾಮಿಯೇ, ಭವಸಾಗರದ ಆಳದಲ್ಲಿ ಬಿದ್ದಿದ್ದ ನನ್ನನ್ನು ಅದೃಷ್ಟವಶಾತ್ ವೇಗವಾಗಿ ಸಮೀಪಿಸಿದ ನಿನ್ನ ಪಾದಪದ್ಮವೆಂಬ ತೆಪ್ಪವು ಮೇಲೆತ್ತಿತು. 'ಈಗ ಆ ತೆಪ್ಪವನ್ನು ಹಿಡಿಯದಿದ್ದರೆ ಮತ್ತೆ ಭವಸಾಗರದಲ್ಲಿಯೇ ಮುಳುಗುವೆನು' ಎಂದು ತಿಳಿದು ಅದನ್ನೇ ಹಿಡಿದಿದ್ದೇನೆ. ಆದ್ದರಿಂದ ನಿನ್ನ ಚರಣವೆಂಬ ತೆಪ್ಪವು ನನ್ನನ್ನು ದಾಟಿಸಲಿ.

ದೇಶೋಽಭೀಷ್ಟಫಲಪ್ರದೋಽಯಮಸಮಃ ಕಾಲಃ ಕ್ಷಣಾತ್ಸಿದ್ಧಿದಃ
ಸಮ್ಯಗ್‌ಜ್ಞಾನಯುತಂ ಶರೀರಮಧುನಾ ಮಾನುಷ್ಯಮೇತತ್ತ್ರಯಮ್ |

ಲಬ್ಧ್ವಾ ದುರ್ಲಭಮಪ್ಯನೇಕಸುಕೃತೈಸ್ತದ್ವ್ಯರ್ಥಯನ್ ಮೂಢಧೀ -
ಸ್ತ್ವತ್ಸೇವಾರಹಿತಸ್ತ್ರಿಕರಣೈರ್ದೇವಾಸ್ಮಿ ಕಾ ಮೇ ಗತಿಃ || ೨೦ ||

ಇಷ್ಟಾರ್ಥವನ್ನು ನೀಡುವ ಈ ದೇಶ, ಕ್ಷಣಮಾತ್ರದಲ್ಲಿ ಸಿದ್ಧಿಯನ್ನು ಕೊಡುವ ಅಸಾಮಾನ್ಯ ಕಾಲ, ಸುಜ್ಞಾನದಿಂದ ಕೂಡಿದ ಮಾನವ ಶರೀರ - ಇವು ಮೂರೂ ದುರ್ಲಭವಾದವು. ಈಗ ಬಹಳ ಪುಣ್ಯದಿಂದ ಅವುಗಳನ್ನು ಹೊಂದಿದರೂ, ಮೂರ್ಖನಾದ ನಾನು ತ್ರಿಕರಣಪೂರ್ವಕವಾಗಿ ನಿನ್ನನ್ನು ಪೂಜಿಸದೆ ವ್ಯರ್ಥಗೊಳಿಸಿದ್ದೇನೆ. ಪ್ರಭುವೇ, ನನಗೆ ಗತಿಯಿನ್ನೇನಿದೆ?

ಕೃತ್ವಾಗಾಂಸಿ ತವೇಶ ಜನ್ಮಸು ತಥಾಗಣ್ಯೇಷು ಭೂಯಾಂಸ್ಯಹಂ
ಕುರ್ವೇ ತಾನಿ ಮಮಾದ್ಯದಂಡನವಿಧೌ ನಾಲಂ ಸಹಸ್ರಾಂತಕಾಃ |
ಯಾಚೇ ತ್ವಾಮಿಹ ಯೋಗಿದುರ್ಲಭಮಹೋ ಮೋಕ್ಷಂ ಕಿಯತ್ಸಾಹಸಂ
ವಿಶ್ವಸ್ಯೈವ ಭವತ್ಕೃಪಾಮಶರಣಂ ಪಾಹಿ ಪ್ರಪನ್ನಂ ಚ ಮಾಮ್ || ೨೧ ||

ಹೇ ಈಶನೇ, ನಾನು ನಿನ್ನಲ್ಲಿ ಅಪರಾಧಗಳನ್ನು ಎಸಗಿದ್ದೇನೆ. ಹಾಗೆಯೇ ಮುಂಬರುವ ಅಸಂಖ್ಯಾತ ಜನ್ಮಗಳಲ್ಲಿ ಇನ್ನೂ ಅಪರಾಧಗಳನ್ನು ಮಾಡುವೆನು. ಈಗ ನನ್ನನ್ನು ಶಿಕ್ಷಿಸಲು ಸಾವಿರ ಯಮರೂ ಸಮರ್ಥರಾಗರು. ಆದರೂ ಯೋಗಿಗಳಿಗೆ ದುರ್ಲಭವಾದ ಮೋಕ್ಷಕ್ಕಾಗಿ ನಿನ್ನನ್ನು ಬೇಡುತ್ತೇನೆ. ಆಹಾ! ಎಂತಹ ಸಾಹಸ! ದಯೆಯಿಂದ ಪ್ರಪಂಚವನ್ನೇ ಪಾಲಿಸುವ ನೀನು ಅನಾಥನೂ, ಶರಣಾಗತನೂ ಆದ ನನ್ನನ್ನು ಪಾಲಿಸು.

ಕರ್ತುಂ ಕರ್ಮ ನ ಶಕ್ಯತೇ ಸದಪಿ ನೋ ತಪ್ತಂ ತಪಃ ಕಿಂಚನ
ಸ್ವಾಮಿನ್ ಮಂತ್ರಜಪೋ ಮಯೇಶ ನ ಕೃತಸ್ತ್ವದ್ಧ್ಯಾನಮದ್ಯಾಪಿ ಮೇ |
ನೈವ ಜ್ಞಾನಮಶೇಷದೋಷಶಮನಂ ನಾಪಿ ತ್ವದೀಯಂ ಕಥಂ
ಕಾರುಣ್ಯಾಂಬುನಿಧೇ ಭವೋಗ್ರಜಲಧೇಃ ಪಾರಂ ತರೀಯಂ ಪ್ರಭೋ || ೨೨ ||

ಎಲೈ ಪ್ರಭುವೇ, ನಾನು ಈಗಲೂ ಸತ್ಕಾರ್ಯವನ್ನು ಮಾಡಲು ಸಮರ್ಥನಲ್ಲ; ಸ್ವಲ್ಪವೂ ತಪಸ್ಸನ್ನು ಆಚರಿಸಲಿಲ್ಲ; ಮಂತ್ರವನ್ನು ಜಪಿಸಲಿಲ್ಲ; ನಿನ್ನ ಧ್ಯಾನವನ್ನು ಮಾಡಲಿಲ್ಲ; ಸರ್ವದೋಷಪರಿಹಾರಕವಾದ ನಿನ್ನ ಜ್ಞಾನವೂ ನನಗಿಲ್ಲ. ಹೇ ದಯಾಸಾಗರನೇ, ಸ್ವಾಮಿಯೇ, ನಾನು ಘೋರ ಭವಸಾಗರವನ್ನು ದಾಟಿ ದಡವನ್ನು ಹೇಗೆ ತಾನೇ ಸೇರಲಿ?

ಅರ್ಕದ್ರೋಣಕುಶಾದಿಭಿರ್ಭಜನತಸ್ತೇ ಪ್ರಾಪ್ಯತೇ ಮಾನವೈ-
ರ್ಮೋಕ್ಷಶ್ರೀರಿತಿ ವೇದ್ಮಿ ದೇವ ತದಪಿ ವ್ಯಾಮೋಹತೋ ವ್ಯರ್ಥಯನ್ |
ಕಾಲಂ ದುರ್ವಿಷಯೇಷು ದುಷ್ಟಜನತಾಸಂಸರ್ಗತಃ ಕೇವಲಂ
ಕ್ಲಿಷ್ಟೋಽಹಂ ಪದಯೋಃ ಪತಾಮಿ ಭವತಸ್ತ್ರಾಯಸ್ವ ಧರ್ಮಾಯ ಮಾಮ್ || ೨೩ ||

ಹೇ ಪರಮಾತ್ಮನೇ, ಮಾನವರು ಎಕ್ಕೆ ಹೂ, ತುಂಬೆ ಹೂ, ದರ್ಭೆ ಇತ್ಯಾದಿಗಳಿಂದ ನಿನ್ನನ್ನು ಆರಾಧಿಸಿ, ಮೋಕ್ಷವನ್ನು ಹೊಂದುವರೆಂದು ಅರಿತಿದ್ದೇನೆ. ಆದರೆ ನಾನು

ವ್ಯಾಮೋಹದಿಂದ ಕೆಟ್ಟ ವಿಷಯಗಳಲ್ಲಿ, ಕೆಟ್ಟವರ ಸಹವಾಸದಲ್ಲಿ ನಿಷ್ಪ್ರಯೋಜಕವಾಗಿ ಕಾಲವನ್ನು ಕಳೆದಿದ್ದೇನೆ. ಈಗ ಕಷ್ಟಕ್ಕೊಳಗಾಗಿ ನಿನ್ನ ಚರಣಗಳಿಗೆ ನಮಿಸುತ್ತೇನೆ. ಶರಣಾಗತವತ್ಸಲನೆಂಬ ನಿನ್ನ ಧರ್ಮಕ್ಕಾಗಿ ನನ್ನನ್ನು ರಕ್ಷಿಸು.

ಸಂಜಾತೋಽಸಿ ಮಹೇಶ ದೇಶಿಕಹೃದಂಭೋಜೇ ವಸನ್ ಮತ್ಕರೇ
ಕಂಜಾತೇ ತವ ಖೇಲಸಂ ಸಹ ಸದಾ ವಾಣ್ಯಾ ಪುರಾಣ್ಯಾ ಪುನಃ |
ಲೋಕೇಶಃ ಪ್ರಥಿತೋಽವರುಹ್ಯ ವಿಮಲಂ ಹಂಸಂ ಯತೋ ವರ್ತಸೇ
ವಿಶ್ವಸ್ರಷ್ಟೃತಯಾ ತವೈವ ಹಿ ಪರಬ್ರಹ್ಮತ್ವಮತ್ರೋಚಿತಮ್ || ೨೪ ||

ಹೇ ಪರಶಿವನೇ, ನೀನು ಗುರುವಿನ ಹೃದಯಕಮಲದಲ್ಲಿ ಜನಿಸಿ, ನನ್ನ ಕರಕಮಲದಲ್ಲಿ ನೆಲೆಸಿರುವೆ. ಪುರಾತನವಾದ ವೇದದೊಡನೆ ಸದಾ ವಿಹರಿಸುವೆ. ಜಗದೀಶನೆಂದು ಖ್ಯಾತನಾಗಿ, ಪವಿತ್ರ ಪರಮಹಂಸದ ಮೇಲೆ ಕುಳಿತಿರುವೆ. ವಿಶ್ವಸೃಷ್ಟಿಯನ್ನು ಮಾಡುವುದರಿಂದಲೇ ನಿನಗೆ ಪರಬ್ರಹ್ಮತ್ವ ಪದವಿಯು ಸೂಕ್ತವಾಗಿದೆ.

ಶ್ರೀಭಾಸ್ವದ್ರುಚಿರಂಜಿತೇ ಗುಣಯುತೇ ಸಾರೇ ಪರಾಗಾಂಚಿತೇ
ಭೃಂಗಸ್ತ್ವಂ ಪ್ರಣವೋತ್ಥನಾದಕಲಿತಃ ಸನ್ಮಾನಸಾಂಭೋರುಹೇ |
ತ್ವದ್ಧ್ಯಾನಾದ್ಭ್ರಮರೋಽಭವನ್ನಹಮಪಿ ತ್ವತ್ಪಾದಪದ್ಮಾಶ್ರಿತಃ
ಸ್ವಾಮಿನ್ನಸ್ಮಿ ರಸಾದಸಾರಸುಮನಸ್ತೋಮೇ ನಿರಸ್ತಾದರಃ || ೨೫ ||

ಎಲೈ ಈಶನೇ, ಕಾಂತಿಮಯವೂ, ಗುಣಯುಕ್ತವೂ, ಉತ್ಕೃಷ್ಟವೂ ಆದ ಶ್ರೇಷ್ಠ ಹೃದಯಕಮಲದಲ್ಲಿ ನೀನು ಓಂಕಾರವೆಂಬ ನಾದದಿಂದ ಕೂಡಿದ ಭ್ರಮರನಾಗಿದ್ದೀಯೆ. ನಿನ್ನ ಧ್ಯಾನದಿಂದ ಕೂಡಿದ ನಾನು ಸಹ ಭ್ರಮರವಾಗಿ ನಿನ್ನ ಚರಣಕಮಲವನ್ನು ಆಶ್ರಯಿಸಿದ್ದೇನೆ; ಸೊಗಸಿಲ್ಲದ ಇತರ ಕುಸುಮಗಳಲ್ಲಿ ಆಸಕ್ತಿಯನ್ನು ತೊರೆದಿದ್ದೇನೆ.

ದೋಷಾವಿಷ್ಕರುಚಿಃ ಕಲಂಕಸಹಿತಃ ಸಚ್ಚಕ್ರವಿದ್ವೇಷಭೃ -
ನ್ಮಿತ್ರಾಲೋಕನಿರಾದರೋಽತಿಜಡಿಮಾ ಕಾಮಾನುರಕ್ತೋಽಸ್ಮ್ಯಹಮ್ |
ಧತ್ಸೇ ಮೂರ್ಧ್ನಿ ತಮೇವ ಮಾದೃಶಮಮುಂ ದೋಷಾಕರಂ ಮಾಂ ಕೃಶಂ
ಪಾದಾಬ್ಜೇಽಪಿ ಗೃಹಾಣ ಭೂಷಣತಯಾ ಕಾರುಣ್ಯತಸ್ತೇಽಧುನಾ || ೨೬ ||

ನಾನು ದೋಷಾಸಕ್ತನೂ, ಕಳಂಕಿತನೂ, ಸಜ್ಜನದ್ವೇಷಿಯೂ, ಸ್ನೇಹದೂರನೂ, ಅತಿ ಆಲಸಿಯೂ, ಕಾಮಿಯೂ ಆಗಿದ್ದೇನೆ. ನನ್ನಂತೆಯೇ ಇರುವ, ಇರುಳಲ್ಲಿ ಕಾಂತಿಯುತನಾದ, ಕಲಂಕಸಹಿತನಾದ, ಶ್ರೇಷ್ಠ ಚಕ್ರವಾಕ ಪಕ್ಷಿಗಳ ವೈರಿಯಾದ, ಸೂರ್ಯವೀಕ್ಷಣೆಯಲ್ಲಿ ನಿರಾಸಕ್ತನಾದ, ಅತಿ ತಂಪಾದ, ಕಾಮಾಸಕ್ತನಾದ ಚಂದ್ರನನ್ನು ಮಾತ್ರ ಶಿರದಲ್ಲಿ ಧರಿಸಿದ್ದೀಯೆ. ದೋಷಿಯಾದ, ಕೃಶನಾದ ನನ್ನನ್ನು ದಯವಿಟ್ಟು ನಿನ್ನ ಪಾದಕಮಲದಲ್ಲಿ ಅಲಂಕಾರವಾಗಿಯಾದರೂ ಸ್ವೀಕರಿಸು.

ದ್ರವ್ಯಂ ದಾತುರಕಿಂಚನಃ ಪರಮಸೌ ಪಾತ್ರಂ ಬುಭುಕ್ಷುರ್ಭೃಶಂ
ಪಾತ್ರಂ ಸಂತತಮನ್ನದಾತುರಧಿಕಂ ಪಾತ್ರಂ ಪಿಪಾಸುರ್ಭುವಿ |
ಪಾನೀಯಂ ದದತಸ್ತಥಾ ಸ್ಮರಹರ ತ್ವದ್ಭಕ್ತಿಭಾಗ್ಯಾದಲಂ
ಶೂನ್ಯಃ ಪಾತ್ರಮಹಂ ದದಸ್ವ ತದಿಹ ತ್ವಂ ದೇವ ದಾತಾ ಮಹಾನ್ || ೨೭ ||

ಹೇ ಕಾಮವೈರಿಯೇ, ಪ್ರಪಂಚದಲ್ಲಿ ಧನದಾನಿಗೆ ಕಡು ದರಿದ್ರನು ಸತ್ಪಾತ್ರನು. ಅನ್ನದಾನಿಗೆ ಅತಿ ಹಸಿದವನು ಸದಾ ಸತ್ಪಾತ್ರನು. ಉದಕದಾನಿಗೆ ಬಲು ಬಾಯಾರಿದವನು ಸತ್ಪಾತ್ರನು. ಹಾಗೆಯೇ ಭಕ್ತಿಭಾಗ್ಯಶೂನ್ಯನಾದ ನಾನು ನಿನ್ನ ಭಕ್ತಿಗೆ ಪಾತ್ರನಾಗಿದ್ದೇನೆ. ಪ್ರಭುವೇ, ಮಹಾದಾನಿಯಾದ ನೀನು ಆ ಭಕ್ತಿಯನ್ನು ಈಗ ದಯಪಾಲಿಸು.

ಶುದ್ಧಾಂತಃಕರಣಾಲವಾಲಕಲಿತಾ ಶ್ರದ್ಧಾಂಬುಸಂವರ್ಧಿತಾ
ಸದ್ಭಾವಾಂಚಿತಪಲ್ಲವಾ ಪ್ರವಿಲಸದ್ಧ್ಯಾನೋದ್ಗಮಾ ಭಾಸತೇ |
ಭಕ್ತಿಃ ಕಲ್ಪಲತಾ ಪ್ರಸಾದಜನಿತಾ ಭೂಯಃ ಪ್ರಸಾದಪ್ರಸೂಃ
ಸದ್ಯಸ್ತೇ ಶಿವ ದುರ್ಲಭಾಂ ತನುಭೃತಾಂ ತಾಂ ತ್ವಾಮಹಂ ಪ್ರಾರ್ಥಯೇ || ೨೮ ||

ಎಲೈ ಶಂಕರನೇ, ಪವಿತ್ರಮನವೆಂಬ ಪಾತಿಯಲ್ಲಿ ನೆಟ್ಟ ಭಕ್ತಿಯೆಂಬ ಕಲ್ಪಲತೆಯು ಶ್ರದ್ಧೆಯೆಂಬ ನೀರಿನಿಂದ ಬೆಳೆದು, ಸದ್ಭಾವವೆಂಬ ಚಿಗುರುಗಳಿಂದ ಮತ್ತು ಶ್ರೇಷ್ಠಧ್ಯಾನವೆಂಬ ಫಲಪುಷ್ಪಗಳಿಂದ ಕೂಡಿದೆ. ನಿನ್ನ ಪ್ರಸಾದದಿಂದ ಜನಿಸಿದ ಆ ಲತೆಯು ಶೀಘ್ರವಾಗಿ ಪ್ರಸಾದವನ್ನು ನೀಡುತ್ತಾ ಕಂಗೊಳಿಸುತ್ತಿದೆ. ಮನುಷ್ಯದುರ್ಲಭವಾದ ಆ ಲತೆಗಾಗಿ ನಾನು ನಿನ್ನನ್ನು ಬೇಡುತ್ತೇನೆ.

ಸರ್ವಜ್ಞೋಽಸಿ ದಯಾಪರೋಽಪ್ಯಸಿ ಮಹಾದಾನೀ ಸಮಂತಾದಸಿ
ತ್ರೈಲೋಕ್ಯಪ್ರಭುರಸ್ಯನಾಥಭರಣೇ ದಕ್ಷೋಽಸಿ ಪೂರ್ಣೋಽಪ್ಯಸಿ |
ಜ್ಞಾತ್ವೈವಂ ಶರಣಾಗತೋಽಪಿ ಬಹುಭಿಃ ಕ್ಲೇಶೈರ್ನ ಮುಕ್ತೋಽಸ್ಮ್ಯಹಂ
ನೈವಾಗಸ್ತವ ತಾವದೇವ ಶಿವ ಮೇ ಪುಣ್ಯಂ ಪುರೋಪಾರ್ಜಿತಮ್ || ೨೯ ||

ಹೇ ಶಂಕರನೇ, ನೀನು ಸರ್ವಜ್ಞನೂ, ಕರುಣಾಳುವೂ, ಮಹಾದಾನಿಯೂ, ಸಕಲ ಜಗದೊಡೆಯನೂ, ಅನಾಥರಕ್ಷಣೆಯಲ್ಲಿ ಸಮರ್ಥನೂ, ಪರಿಪೂರ್ಣನೂ ಆಗಿರುವೆ. ಇದನ್ನು ತಿಳಿದ ನಾನು ನಿನಗೆ ಶರಣಾದರೂ, ಅನೇಕ ದುಃಖಗಳಿಂದ ಬಿಡುಗಡೆಯನ್ನು ಹೊಂದಿಲ್ಲ. ಇದರಲ್ಲಿ ನಿನ್ನ ತಪ್ಪೇನಿಲ್ಲ. ನನ್ನ ಪೂರ್ವಜನ್ಮದ ಪುಣ್ಯ ಅಷ್ಟೇ ಎಂದು ತೋರುತ್ತದೆ.

ಮಚ್ಚೇತಸ್ಸ್ಫುಟದರ್ಪಣೇ ವಿಮಲಿತೇ ವಿದ್ಯಾಲಸದ್ಭಸ್ಮನಾ
ದೇವ ತ್ವಂ ಪ್ರತಿಬಿಂಬಿತೋಽಸಿ ತಮಹಂ ತ್ವಾಂ ದ್ರಷ್ಟುಮದ್ಯೋತ್ಸಹೇ |
ಜಾತ್ಯಂಧಸ್ಯ ನ ಮೇಽಸ್ತಿ ಲೋಚನಮಿದಂ ಸುಜ್ಞಾನರೂಪಂ ಪ್ರಭೋ
ತತ್ತ್ವಂ ದೇಹಿ ಮಹೇಶ ತೇನ ಸಹಸಾ ದೃಷ್ಟ್ವಾಽಸ್ಮಿ ಧನ್ಯೋತ್ತಮಃ || ೩೦ ||

ಸ್ವಾಮಿಯೇ, ನೀನು ವಿದ್ಯೆಯೆಂಬ ಮಿರುಗುವ ಭಸ್ಮದಿಂದ ಶುಭ್ರವಾದ ನನ್ನ ಮನವೆಂಬ

ದರ್ಪಣದಲ್ಲಿ ಪ್ರತಿಬಿಂಬಿತನಾಗಿರುವೆ. ಅಂತಹ ನಿನ್ನನ್ನು ಕಾಣಲು ನಾನು ಈಗ ಬಲು ಉತ್ಸುಕನಾಗಿದ್ದೇನೆ. ಹುಟ್ಟು ಕುರುಡನಾದ ನನಗೆ ಈ ಸುಜ್ಞಾನರೂಪವಾದ ನೇತ್ರವಿಲ್ಲ, ಹೇ ವಿಭುವೇ, ಜಗದೀಶನೇ, ಅದನ್ನು ನನಗೆ ದಯಪಾಲಿಸು. ಅದರ ಮೂಲಕ ನಿನ್ನನ್ನು ತಕ್ಷಣ ವೀಕ್ಷಿಸಿ ಪರಮ ಧನ್ಯನಾಗುತ್ತೇನೆ.

ಸರ್ವೇಷಾಂ ಜಗತಾಂ ಪತಿಃ ಶುಭಗುಣೋದಾರೋ ವದಾನ್ಯೋತ್ತಮಃ
ಸರ್ವಜ್ಞಃ ಸಕಲಾಮರಾರ್ಚಿತಪದೋ ನಿತ್ಯಸ್ಸದಾ ಸಕ್ಷಮಃ |
ನಾದಸ್ತ್ವಂ ಸತತಂ ಮಮೇತ್ಯವಿದಿತೋ ಜ್ಞಾತೋದ್ಯ ತಸ್ಮಾದಹಂ
ಧನ್ಯೋಽಸ್ಮೀತಿ ಸಸಂಭ್ರಮಃ ಕುರು ಕೃಪಾಮದ್ಯಾಪಿ ಭೃತ್ಯೇ ಮಯಿ || ೩೧ ||

ಸಕಲ ಜಗದೊಡೆಯನೂ, ಮಂಗಳಕರನೂ, ಕರುಣಾಮಯಿಯೂ, ಮಹಾದಾನಿಯೂ, ಸರ್ವಜ್ಞನೂ, ಸಕಲ ದೇವತೆಗಳು ಪೂಜಿಸುವ ಪಾದವುಳ್ಳವನೂ, ನಿತ್ಯನೂ, ಸದಾ ಕ್ಷಮಾಶೀಲನೂ, ನಾದರೂಪಿಯೂ ಆದ ನಿನ್ನನ್ನು ನಾನು ಮೊದಲು ಅರಿತಿರಲಿಲ್ಲ. ಈಗ ಅರಿತಿದ್ದರಿಂದ ಕೃತಾರ್ಥನಾದೆನೆಂದು ಸಂಭ್ರಮಗೊಂಡಿದ್ದೇನೆ. ಆದ್ದರಿಂದ ಸೇವಕನಾದ ನನ್ನಲ್ಲಿ ಈಗಲಾದರೂ ದಯೆತೋರು.

ಸರ್ವೈಶ್ವರ್ಯಯುತೋಽಪಿ ವಿಶ್ವಭುವನಾಧೀಶೋಽಪಿ ಮಿತ್ರೀಕೃತ -
ಶ್ರೀದೋಽಪ್ಯುತ್ತಮಹೇಮಶೈಲನಿಲಯೋಽಪ್ಯಸ್ಥ್ಯಾದಿಭೂಷಾಧರಃ |
ಭಿಕ್ಷಾಶೀ ಭಸಿತಾಂಗರಾಗರಚನಸ್ತ್ವಂ ದೇವ ಭಕ್ತ್ಯಾ ನತಾನ್
ಸಶ್ರೀಕಾನ್ ಕುರುಷೇ ವಿರಾಗಸಹಿತಂ ದಾನಂ ತವಾತ್ಯದ್ಭುತಮ್ || ೩೨ ||

ಹೇ ಈಶ್ವರನೇ, ಸಕಲೈಶ್ವರ್ಯಸಂಪನ್ನನಾದರೂ, ಪರಮೇಶ್ವರನಾದರೂ, ಕುಬೇರನ ಗೆಳೆಯನಾದರೂ, ಸುಮೇರುಗಿರಿವಾಸಿಯಾದರೂ, ಅಸ್ಥಿ ಮೊದಲಾದವುಗಳಿಂದ ಅಲಂಕೃತನಾಗಿ, ಭಿಕ್ಷಾನ್ನವನ್ನು ಸೇವಿಸುತ್ತಾ ಭಸ್ಮಲೇಪಿಯಾಗಿ ಇರುವ ನೀನು ಭಕ್ತಿಯಿಂದ ನಮಿಸಿದವರನ್ನು ಸಿರಿವಂತರನ್ನಾಗಿ ಮಾಡುತ್ತೀಯೆ. ನಿರ್ಲಿಪ್ತವಾದ ನಿನ್ನ ದಾನವು ಅತಿ ಆಶ್ಚರ್ಯಕರವಾದುದು.

ದಾತವ್ಯಂ ನ ಹಿ ನವ್ಯಮೀಶ ಸಕಲಂ ವಸ್ತು ಕ್ಷಿತೌ ತಾವಕಂ
ಕಸ್ಮಿನ್ನಪ್ಯನುರಾಗ ಏವ ಭವತೋ ನಾಸ್ತ್ಯೇವ ವಸ್ತುನ್ಯಹೋ |
ಮಂತ್ರೋ ನಾಸ್ತಿ ನವಸ್ತ್ವದೀಯವಚನಂ ತ್ವಂ ಮಾನಸಾಗೋಚರಃ
ಪೂಜಾವ್ಯಾಜತ ಏವ ಸರ್ವವರದಃ ಸ್ವಾಮಿನ್ ಕೃಪಾ ಕೀದೃಶೀ || ೩೩ ||

ಎಲೈ ಜಗದೀಶನೇ, ಭೂಮಿಯ ಸಮಸ್ತ ವಸ್ತುಗಳೂ ನಿನ್ನದು. ಆದ್ದರಿಂದ ನಿನಗೆ ಹೊಸದಾಗಿ ಕೊಡುವುದೇನೂ ಇಲ್ಲ. ಯಾವುದೇ ವಸ್ತುವಿನಲ್ಲಿಯೂ ನಿನಗೆ ಅನುರಕ್ತಿಯೇ ಇಲ್ಲ. ನಿನಗೆ ಹೊಸದಾದ ಮಂತ್ರವು ಇಲ್ಲ. ಮಾತೆಲ್ಲವೂ ನಿನ್ನ ಪರವೇ ಆಗಿದೆ. ಪ್ರಭುವೇ, ಮನೋತೀತನಾದ ನೀನು ಸಕಲ ವರಗಳನ್ನು ನೀಡುವುದಕ್ಕೆ ನಾನು ಮಾಡುವ ಪೂಜೆಯು